**ಅಸಲು ದಾವ ಸಂಖ್ಯೆಃ 327/2026**
ಪಿ.ಡಬ್ಲೂ **-1**

**ದಿಃ 29-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಮಾನ್ಯ ಡಿಜಿಪಿ ರವರಿಂದಃ-**

1. ನಾನು ಈ ದಾವೆಯನ್ನು ನನ್ನ ಸಹೋದರ ದೇವಪ್ಪ ಸಿದ್ರಾಯಿ ಪಾಟೀಲ ರವರ ವಾರಸಾ ಪ್ರಮಾಣ ಪತ್ರ ಪಡೆಯಲು ಹೂಡಿರುತ್ತೇನೆ. ದೇವಪ್ಪ ಸಿದ್ರಾಯಿ ಪಾಟೀಲ ರವರಿಗೆ ಬೇರೆ ಯಾರೂ ಸಹೋದರ ಸಹೋದರಿಯರು ಇರುವುದಿಲ್ಲ. ದೇವಪ್ಪ ರವರು ಗೌಂಡಿ ಕೆಲಸ ಮಾಡುತ್ತಿದ್ದರು. ದೇವಪ್ಪ ರವರು ಗೌಂಡವಾಡ ಗ್ರಾಮ, ಬೆಳಗಾವಿಯಲ್ಲಿ ವಾಸವಿರುತ್ತಿದ್ದರು. ನಾನು ಬೆಳಗಾವಿಯ ಶಹಾಪೂರದಲ್ಲಿ ವಾಸವಿರುತ್ತೇನೆ. ಗೌಂಡವಾಡ ಗ್ರಾಮದಲ್ಲಿ ದೇವಪ್ಪ ರವರ ಹೆಂಡತಿ ಮಕ್ಕಳು ವಾಸವಿರುತ್ತಿದ್ದರು ಎಂದರೆ ಸಾಕ್ಷಿ ಸದರಿ ದೇವಪ್ಪ ರವರು ಮದುವೆಯಾಗಿರಲಿಲ್ಲ ಎಂದು ನುಡಿಯುತ್ತಾರೆ. ದೇವಪ್ಪ ರವರು ದಿಃ 06-02-2023 ರಂದು ಮರಣಹೊಂದಿರುತ್ತಾರೆ. ದೇವಪ್ಪ ರವರು ಮರಣಹೊಂದುವ ಕಾಲಕ್ಕೆ ಅವರಿಗೆ ಸುಮಾರು 25 ರಿಂದ 26 ವರ್ಷ ವಯಸ್ಸಾಗಿತ್ತು. ನನ್ನ ತಂದೆ ತಾಯಿಯ ಮರಣದ ನಂತರ ಅವರ ವಾರಸಾ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ಅವರ ವಾರಸಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಅದನ್ನು ಹಾಜರುಪಡಿಸಿದ್ದಲ್ಲಿ ಸಿದ್ರಾಯಿ ರವರಿಗೆ ಎಷ್ಟು ಜನ ಮಕ್ಕಳು ಎಂದು ತಿಳಿದುಬರುತ್ತದೆ ಎಂಬ ಕಾರಣಕ್ಕೆ ನಾನು ವಾರಸಾ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದೇವಪ್ಪ ರವರ ವಾರಸಾ ಪ್ರಮಾಣ ಪತ್ರ ಕೋರಿ ತಹಶೀಲ್ದಾರ ರವರಿಗೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ತಾನು ಮೌಖಿಕವಾಗಿ ಕೇಳಿಕೊಂಡಿರುವುದಾಗಿ ನುಡಿಯುತ್ತಾರೆ. ನಾನುತಹಶೀಲ್ದಾರ ರವರಿಗೆ ಅರ್ಜಿ ಸಲ್ಲಿಸಿದ್ದಲ್ಲಿ ದೇವಪ್ಪ ರವರ ವಾರಸುದಾರರ ಕುರಿತು ನಿಜಾಂಶ ತಿಳಿದುಬರುತ್ತದೆ ಎಂಬ ಕಾರಣಕ್ಕೆ ನಾನು ಅಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ದೇವಪ್ಪ ರವರ ಸಹೋದರಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದೇವಪ್ಪ ರವರಿಗೆ ಯಾವುದೇ ರೀತಿಯಿಂದ ಸಂಬಂಧಿಕಳಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**